# ಭಕ್ತಿ

ಭಕ್ತಿ ಎನ್ನುವುದು ಒಂದು ಸಾಧನೆ. ಭಜ್ ಎಂಬ ಧಾತುವಿನಿಂದ ಭಕ್ತಿ ಬಂದಿದೆ. ಭಕ್ತಿಗೆ ಸೇರು, ಆಶ್ರಯಿಸು ಎಂಬ ಅರ್ಥವಿದೆ. ಆಶ್ರಯವನ್ನು ಬಯಸುವವನು ಜೀವಾತ್ಮ, ನೀಡುವವನು ಪರಮಾತ್ಮ. ಆಶ್ರಯವನ್ನು ಬಯಸಿ ಪಡೆದು ಕೊಳ್ಳುವುದೇ ಭಕ್ತಿ.

ಇದನ್ನು ಸಾಧನೋತ್ತಮನೆಂದು ಬಣ್ಣಿಸುತ್ತಾರೆ. ಉಳಿದ ಸಾಧನೆಗಳಾದ ಜ್ಞಾನ, ವಿರಕ್ತಿ, ಕರ್ಮಗಳಿಗೆ ಭಕ್ತಿಯಿಂದಲೇ ಪರಿಪಾಕ ಒದಗುವುದು. ಧೃಡವಾದ ಭಕ್ತಿಯಿಂದ ಮಾತ್ರ ಭಗವಂತನನ್ನು ಒಲಿಸಿಕೊಳ್ಳುವುದು ಸಾಧ್ಯ ಎಂಬ ನಂಬಿಕೆ ಇದೆ. ಹರಿದಾಸರು ಭಕ್ತಿಯನ್ನು ಮಧ್ವಾಚಾರ್ಯರು ಹಾಕಿಕೊಟ್ಟ ಚೌಕಟ್ಟಿನಲ್ಲಿಯೇ ಗ್ರಹಿಸಿದ್ದಾರೆ. ಅವರ ಪ್ರಕಾರ ಪರಮಾತ್ಮ ಸ್ವತಂತ್ರ, ತಾನು ಪರತಂತ್ರ, ಅವನು ಅಂಶಿ, ತಾನು ಅಂಶ, ಅವನು ಬಿಂಬ, ತಾನು ಪ್ರತಿಬಿಂಬ, ಅವನು ಈಶ, ತಾನು ದಾಸ ಎಂಬುದನ್ನು ಮನಗಂಡು ಅವನಲ್ಲಿ ಆತ್ಯಂತಿಕ ಕಾಮನೆಯಿಲ್ಲದ ಸ್ನೇಹವನ್ನು ಮಾಡುವುದೇ ಭಕ್ತಿಯೆಂದು ತಿಳಿಸಿದ್ದಾರೆ. ಇದನ್ನು ಎಲ್ಲ ಹರಿದಾಸರ ಕೀರ್ತನೆಗಳಲ್ಲಿ ಕಾಣಬಹುದು.

ಭಾಗವತದಲ್ಲಿ ಕಪಿಲರು ದೇವಹೂತಿಗೆ ಭಕ್ತಿ ಯೋಗವು ಬಹುವಿಧವಾದುದೆಂದು ಹೇಳಿದ್ದಾರೆ. ಸಾತ್ವಿಕ, ರಾಜಸ, ತಾಮಸ ಎಂಬ ಸಗುಣ ಭಕ್ತಿ ವಿಧಗಳು; ಅವನ್ನು ಮೀರಿದ ನಿರ್ಗುಣವೆಂಬ ಆತ್ಯಂತಿಕ ಭಕ್ತಿ, ಅಹೇತುಕವಾದ (ಪ್ರಯೋಜನಾಪೇಕ್ಷೆಯಿಲ್ಲದೆ, ಕಾಮನೆಯಿಲ್ಲದೆ) ಅವ್ಯವಹಿತವಾದ (ನಿರಂತರವಾದ, ಎಡೆಬಿಡದೆ) ಪ್ರೇಮ ಪ್ರವಾಹವೇ ನಿರ್ಗುಣ ಭಕ್ತಿಯ ಸ್ವಾರಸ್ಯ. ಇದೆ ಅಪರೋಕ್ಷಕ್ಕೆ ಕಾರಣವಾಗುವಂಥದು. ಸಾಲೋಕ್ಯ, ಸಾರಿಷಿಣಿ, ಸಾಮಿಪ್ಯ, ಸಾಯುಜ್ಯಗಳೆಂಬ ಮುಕ್ತಿಗಳಲ್ಲಿ ಆಯಾ ಫಲವನ್ನು ನೀಡುವೆನೆಂದರೂ ಅದಕ್ಕೆ ಒಡಂಬಡದೆ 'ನಿನ್ನ ಸೇವೆಯನ್ನಷ್ಟೇ ಕೊಡು' ಎಂದು ಬೇಡಿಕೊಳ್ಳುವ ಭಾವ. ಈ ಬಗೆಯ ಭಕ್ತಿಯ ಮುಖ್ಯ ಸಾಧಕತ್ವವನ್ನೂ ಆಧಿಕ್ಯವನ್ನೂ ಶ್ರೀಪಾದರಾಜರು, ವ್ಯಾಸರಾಜರು, ಪುರಂದರ ದಾಸರು ತಮ್ಮ ಕೃತಿಗಳಲ್ಲಿ ಎತ್ತಿ ತೋರಿಸಿದ್ದಾರೆ.

ಭಕ್ತಿಯಲ್ಲಿ ಅರಿವಿನ (ಜ್ಞಾನ) ಅಂಶವಿದೆ, ಪ್ರೀತಿಯ (ಸ್ನೇಹ) ಅಂಶವೂ ಇದೆ. ವಸ್ತುವಿನ ಮೇಲೆ ಪ್ರೀತಿ ಒದಗಬೇಕಾದರೆ ಅದರ ಹಿರಿಮೆಯ ಕುರಿತು ಅರಿವಿರಬೇಕು (ಮಹಾತ್ಮ್ಯ ಜ್ಞಾನ), ಅದನ್ನು ಪಡೆದುಕೊಳ್ಳುವ ಬಗೆಯ ಅರಿವೂ ಇರಬೇಕು (ಇಷ್ಟ ಸಾಧನತಾ ಜ್ಞಾನ). ನಿತ್ಯ ಜೀವನದ ಎಲ್ಲ ವಿವರಗಳಲ್ಲೂ ಭಕ್ತಿ ಸೇರಿದರೆ ಅದು ಮುಕ್ತಿಗೆ ಸಾಧನವಾಗುತ್ತದೆ. ಇಲ್ಲಿ ಮಲಭಕ್ತಿ ಮತ್ತು ಅಮಲಭಕ್ತಿ ಎಂಬ ವಿವರಣೆಗಳಿವೆ.

- **ಮಲಭಕ್ತಿ:** ಪ್ರೀತಿಯಲ್ಲಿ ಪ್ರಾಪಂಚಿಕ ವಿಷಯಗಳ ಬಯಕೆಯಿದ್ದರೆ ಅದು ಮಲಭಕ್ತಿ. ಮಂದ - ಮಧ್ಯಮಾಧಿಕಾರಿಗಳಿಗೆ ಇಂತಹ ಭಕ್ತಿಯಿದೆ ಎಂದು ವಿವರಣೆ.

- **ಅಮಲಭಕ್ತಿ:** ಪ್ರಾಪಂಚಿಕ ವಿಷಯಗಳು ಅಸಾರವಾದುವು ಎಂಬ ವಿರಕ್ತಿಯಿದ್ದು, ಪರಮಾತ್ಮನ ಪ್ರಸಾದವೊಂದರಿಂದಲೇ ಮುಕ್ತಿಯೆನ್ನುವ ಕಾರಣದಿಂದ ಮುಕ್ತಿಗೆ ನೇರವಾಗುವ ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಕಾತರವಿದ್ದರೆ, ಅದಕ್ಕನುಗುಣವಾದ ಸ್ನೇಹವಿದ್ದರೆ ಅದು ಅಮಲಭಕ್ತಿ. ಉತ್ತಮಾಧಿಕಾರಿಗಳಿಗೆ ಅಮಲಭಕ್ತಿಯೆಂದು ವಿವರಣೆ. ಅಮಲಭಕ್ತಿಯಲ್ಲಿ ಸಂಸಾರ ಬಂಧನದಿಂದ ಪಾರಾಗುವುದು (ಅನಿಷ್ಟ, ನಿವೃತ್ತಿ) ಅಮುಖ್ಯ ಫಲ; ಮುಕ್ತಿಯು ದೊರಕುವುದು (ಇಷ್ಟ ಪ್ರಾಪ್ತಿ) ಮುಖ್ಯ ಫಲ. ವ್ಯಾಸರಾಯ ಸ್ವಾಮಿಗಳು ತಮ್ಮ ಪ್ರಮೇಯ ರತ್ನ ಮಾಲಿಕೆಯಲ್ಲಿ 'ಅಮಲಾಭಕ್ತಿಶ್ಚ ತತ್ಸಾಧನಂ' ಎಂದು ಹೇಳಿರುವುದರ ಅರ್ಥ ಇದು.

ಜ್ಞಾನ, ಭಕ್ತಿಗಳೆರಡೂ ಜೀವನಿಗೆ ಸ್ವರೂಪಭೂತವಾದ ಗುಣಗಳು. ಆದರೆ ಅವು ಅನಾದ್ಯ ಜ್ಞಾನ, ಹರಿ ವಿಸ್ಮರಣೆಗಳಿಂದಾಗಿ ಮರಿಮಾಚಿ ಹೋಗಿವೆ. ಅವು ಮತ್ತೆ ಪ್ರಕಾಶಕ್ಕೆ ಬರಲು ವಿರಕ್ತಿ, ಸತ್ಸಂಗ, ಸಚ್ಛಾಸ್ತ್ರ ಶ್ರವಣ, ವಿಹಿತ ಕರ್ಮಾನುಷ್ಠಾನ (ವಿಹಿತ = ತಕ್ಕುದಾದ, ಯೋಗ್ಯವಾದ, ನಿಯಮಿಸಲ್ಪಟ್ಟ, ಕ್ರಮಗೊಳಿಸಿದ), ದಾನ, ತೀಥಯಾತ್ರೆ, ತಪಸ್ಸು ಮೊದಲಾದುವು ನೇರವಾಗುತ್ತವೆ. ವಿಹಿತ ಕರ್ಮಾನುಷ್ಠಾನ, ಸಚ್ಛಾಸ್ತ್ರ ಶ್ರವಣಗಳಿಂದ ಮನಸ್ಸಿನ ಕೊಳೆ ಹರಿಯುವುದೆಂದೂ (ಮನೋಮಲನಾಶ), ಸತ್ಸಂಗ, ವಿರಕ್ತಿ, ಹರಿಕಥಾ ಶ್ರವಣ, ತೀರ್ಥಯಾತ್ರೆ ಮೊದಲಾದುವುಗಳಿಂದ ಭಕ್ತಿಯು ಧೃಡವಾಗುವುದೆಂದೂ ಕಲ್ಪನೆ. ಭಕ್ತಿಯ ಸ್ಪಷ್ಟತೆ ಮತ್ತು ದಾರ್ಢ್ಯಗಳು ಜೀವರುಗಳ ಸ್ವರೂಪ, ಯೋಗ್ಯತೆಗಳಲ್ಲಿರುವ ತಾರತಮ್ಯವನ್ನು ಅನುಸರಿಸುತ್ತವೆ.

ಅಂತರಂಗ ಭಕ್ತಿಯಿಂದ ಮಾತ್ರ ದೇವನೊಲುಮೆ ಸಾಧ್ಯ ಎಂದೂ, ಹರಿ ಭಕ್ತಿಯ ಮೂಲಕವೇ ಮೋಕ್ಷವೆಂದೂ ಪುರಂದರ ದಸರಾ / ಹರಿದಾಸರ ನಂಬಿಕೆ. ಆಡಂಬರವಿಲ್ಲದ ಶುದ್ದ ಭಕ್ತಿ ಮಾತ್ರ ಭಗವಂತನೆಡೆಗೆ ಸಾಗಲು ಸಹಕಾರಿ. ಇಂತಹ ಭಕ್ತಿ ಮಾರ್ಗವನ್ನು ಅನುಸರಿಸಿ ಸುಖ, ಆನಂದವನ್ನು ಪಡೆ ಎನ್ನುತ್ತಾರೆ.

ಹರಿದಾಸರುಗಳು ಹೇಳಿರುವಂತೆ **ನವ ವಿಧ ಭಕ್ತಿಗಳನ್ನು** ಬೇರೆಯಾಗಿಯೆ ತಿಳಿಸಲ್ಪಟ್ಟಿದೆ.

ಉದಾಹರಣೆಗಳು:

- .....ತನುವೆಂಬ ಭಾಂಡದಲಿ, ಹರಿ ಭಕ್ತಿ ಎಂಬ ನೀರಿನ ಎಸರಿಟ್ಟು, ಕರುಣವೆಂಬ ಸಾಮಗ್ರಿ ಹಾಕಿ, ಆ ಪಾತ್ರೆಯನ್ನು ತ್ರಿಗುಣವೆಂಬ ಒಲೆಯ ಮೇಲೆ, ಅರಿವು ಎಂಬ ಉರಿಹಚ್ಚಿ ಇರಿಸಿ, ಮೋಕ್ಷ ಪರಿಕರವೆಂಬ ಪಕ್ವಾನ್ನ ಮಾಡಿ, ಉಂಡು ಸುಖಿಸಿರಿ ....
- .... ನಿತ್ಯ ಉಪವಾಸವಿದ್ದು ಹಸಿದು ಬಳಲೇಕೆ, ಮತ್ತೆ ಚಳಿಯೊಳು ಗಂಗೆ ಮುಳುಗಲೇಕೆ, ಹಸ್ತವ ಪಿಡಿದು ಮಾಡುವ ಜಪ - ತಪವೇಕೆ, ಮುಕ್ತಿಗೆ ಸಾಧನವಲ್ಲವೇ ಹರಿನಾಮ ....

*********************